Over 20 Years of Celebrating the Arts

India Foundation for the Arts

I F A

ಕಲಿ-ಕಲಿಸು
AN ARTS EDUCATION TEACHER INITIATIVE
KALI-KALISU

# ಕರ್ನಾಟಕದ ಸರ್ಕಾರಿ ಶಾಲೆಗಳ ಕಲಾ ಶಿಕ್ಷಣ ಯೋಜನೆಯಲ್ಲಿ ಆಸಕ್ತಿಯುಳ್ಳ ಕಲಾವಿದರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ

## ಪ್ರಸ್ತಾವನೆಗಳನ್ನು ಸಲ್ಲಿಸಲು ಕಡೆಯ ದಿನಾಂಕ: 30th November 2018

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐಎಫ್ಎ) ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾತ್ಮಕ ಯೋಜನೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಲಾವಿದರುಗಳಿಂದ ಪ್ರಸ್ತಾವನೆಗಳನ್ನು ಕೋರುತ್ತಿದೆ. ಈ ಕಾರ್ಯಕ್ರಮವು ಸಂಸ್ಥೆಯ 'ಕಲಿ ಕಲಿಸು ' ಚಟುವಟಿಕೆಯ ಒಂದು ಭಾಗವಾಗಿ ಈ ಕೆಳಗಿನ ದ್ಯೇಯೋದ್ದೇಶಗಳನ್ನು ಹೊಂದಿದೆ.

- ಕಲಾತ್ಮಕ ಹಸ್ತಕ್ಷೇಪದ ಮೂಲಕ ಪಠ್ಯಕ್ರಮ ಮತ್ತು ತರಗತಿಯ ಬೋಧನೆಯನ್ನು ಪುಷ್ಟೀಕರಿಸುವುದು.
- ಕಲಾವಿದರು, ಶಿಕ್ಷಕರು ಮತ್ತು ಹಾಗು ಶಾಲೆಯ ಸಮುದಾಯವು ಜೊತೆಯಾಗಿ ಕಾರ್ಯವಹಿಸುವುದನ್ನು ಪ್ರೋತ್ಸಾಹಿಸುವುದು.
- ಯೋಜನಾ ಅವಧಿಯ ನಂತರವೂ ಯೋಜನಾ ಕಾರ್ಯಕ್ರಮವು ಮುಂದುವರೆಯುವ ರೀತಿಯಲ್ಲಿ ಸದೃಢವಾದ ಬುನಾದಿಯನ್ನು ಹಾಕಿರಬೇಕು.

ಈ ಅನುದಾನಗಳ ಬಗೆಗೆ ಹೆಚ್ಚಿನ ಮಾಹಿತಿಗಾಗಿ ಈ ಲಿಂಕ್ ಗೆ ಭೇಟಿ ನೀಡಿ :

https://sites.google.com/site/kalikalisu/project/phase-4---2012

## ಈ ಯೋಜನಾ ಪ್ರಸ್ತಾವಕ್ಕೆ ಬೇಕಾದ ಅರ್ಹತೆ

- ಕಲಾ ಶಿಕ್ಷಣದಲ್ಲಿ ಪೂರ್ವಾನುಭವ ಇರುವ / ಇಲ್ಲದ ಕಲಾವಿದರು ಅಥವಾ ಕಲಾಶಿಕ್ಷಣದಲ್ಲಿ ಸೂಕ್ತವಾದ ತರಬೇತಿ ಪಡೆದವರು ಪ್ರಸ್ತಾಪನೆಯನ್ನು ಸಲ್ಲಿಸಬಹುದು. ಆದಾಗ್ಯೂ, ಪೂರ್ವಾನುಭವ ಇಲ್ಲದಿರುವ ಕಲಾವಿದರು ಕನಿಷ್ಠ ಮಕ್ಕಳೊಂದಿಗೆ ಕಲಾ ಯೋಜನೆಯನ್ನು ನಿರ್ವಹಿಸಿದ ಅನುಭವವನ್ನು ಹೊಂದಿರಬೇಕು.
- ಸ್ಥಳೀಯ ಭಾಷೆಯನ್ನು ಬಲ್ಲವರಾಗಿರಬೇಕು.
- ಭಾರತೀಯ ಪ್ರಜೆಗಳಾಗಿರಬೇಕು ಅಥವಾ ಕನಿಷ್ಠ ಕಳೆದ ಐದು ವರ್ಷಗಳಿಂದ ಭಾರತದಲ್ಲಿ ನೆಲೆಗೊಂಡಿರುವವರಾಗಿರಬೇಕು.

## ಯೋಜನೆಯ ವ್ಯಾಪ್ತಿ

ಯೋಜನೆಯ ವ್ಯಾಪ್ತಿಯಲ್ಲಿ ಕೆಳಕಂಡ ಯಾವುದಾದರೊಂದು ಅಂಶವಿರಬೇಕು.

- ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾಸೇವೆಯಲ್ಲಿ ತೊಡಗಿರುವವರೂ ಒಳಗೊಂಡಂತೆ ಇನ್ನೂ ಹಲವು ಪಾಲುದಾರರನ್ನು ಕಲಾ ಯೋಜನೆಯ ಪರಿಧಿಯಲ್ಲಿ ತರಬೇಕು.
- ಭೋದನೆಯಲ್ಲಿ ಸ್ಥಳೀಯ ಹಾಗೂ ಪ್ರಾಂತೀಯ ಕಲಾ ಪ್ರಕಾರಗಳನ್ನು ಬಳಸಿಕೊಳ್ಳುವ ಮೂಲಕ ಕಲಿಕೆಯನ್ನು ಶ್ರೀಮಂತಗೊಳಿಸುವುದು.
- ವಿಧ್ಯಾರ್ಥಿಕೇಂದ್ರಿತ ಕಲಿಕೆಗೆ ಪ್ರೋತ್ಸಾಹಿಸುವುದು. ಉದಾಹರಣೆಗೆ ಕಲಾ ಪ್ರಕಾರಗಳನ್ನು ಪರಿಚಯಿಸಿ, ಮಕ್ಕಳು ವಿವಿಧ ಕಲಾ ಪ್ರಕಾರಗಳಲ್ಲಿ ನಿರಂತರವಾಗಿ ತೊಡಗುವಂತೆ ಪ್ರೋತ್ಸಾಹಿಸುವುದು. ಅವುಗಳ ಬಗ್ಗೆ

ನಿತ್ಯ ಆನುಭಾವಿಸುವುದು ಹಾಗೂ ಹೆಚ್ಚೆಚ್ಚು ಅಭ್ಯಸಿಸುವ ಕೆಲಸ ಆಗುಮಾಡುವುದು (ರಂಗ, ಚಿತ್ರಕಲೆ, ಸಿನಿಮಾ, ಸಾಹಿತ್ಯ, ಛಾಯಾಚಿತ್ರ, ಸಂಗೀತ ಇತ್ಯಾದಿ)

- ಯೋಜನೆಯು ಕಲಾ ಕಲಿಕೆಯ ಮೂಲಕ ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂಬಂಧಿ ಅರಿವು ಮೂಡಿಸಲು ಶಾಲಾ ಸಮುದಾಯವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಬೇಕು.

## ಯೋಜನಾ ಪ್ರಸ್ತಾವನೆ ಸಲ್ಲಿಸುವ ಪ್ರಕ್ರಿಯೆಯ ಮಾರ್ಗಸೂಚಿ:

- ಯೋಜನೆಗೆ ಸಂಭಂದಪಟ್ಟ ಪ್ರಶ್ನೆಗಳಿದ್ದಲ್ಲಿ, ನಿಮ್ಮ ಹೊಳಹುಗಳ ಬಗ್ಗೆ ಚರ್ಚಿಸಬಯಸಿದಲ್ಲಿ ಅಥವಾ ನಿಮ್ಮ ಕರಡು ಪ್ರಸ್ತಾವನೆಯನ್ನು ನಮಗೆ ಕಳುಹಿಸ ಬಯಸಿದಲ್ಲಿ, **November 15th, 2018** ರ ಒಳಗೆ ನಮ್ಮನ್ನು ಸಂಪರ್ಕಿಸಿ.
- ನಿಮ್ಮ ಅಂತಿಮ ಪ್ರಸ್ತಾವನೆಯು ಲಕೋಟೆಯಲ್ಲಿ **November 30th, 2018** ರ ಒಳಗೆ ನಮಗೆ ಸೇರಬೇಕು.
- ಯೋಜನೆಯ ನಿರೀಕ್ಷಿತ ಕಾಲಾವಧಿ ಕನಿಷ್ಠ ಒಂಬತ್ತು ತಿಂಗಳದ್ದಾಗಿರಬೇಕು ಹಾಗೂ ಗರಿಷ್ಟ ೧೮ ತಿಂಗಳ ಅವಧಿಯದ್ದಾಗಿರಬೇಕು.
- ನಿಮ್ಮ ಯೋಜನೆಯನ್ನು ಕನ್ನಡ, ಉರ್ದು, ಹಿಂದಿ, ಹಾಗು ಇಂಗ್ಲಿಷ್ ಭಾಷೆಯಲ್ಲಿ ಬರೆಯಬಹುದು.
- ಕೊನೆಯ ದಿನಾಂಕದ ಮೊದಲು ನಿಮ್ಮ ಪ್ರಸ್ತಾವನೆಯು ಐಎಫ್ಎ ಗೆ ತಲುಪಲು ನೀವೇ ಜವಾಬ್ದಾರರಾಗಿರುತ್ತೀರಿ. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
- ನಿಮ್ಮ ಪ್ರಸ್ತಾವನೆ ಆಯ್ಕೆಯಾದಲ್ಲಿ ನಿಗಧಿಪಡಿಸಿದ ದಿನಾಂಕದಂದು ಖುದ್ದು ಚರ್ಚೆಗೆ ಬರಬೇಕು.
- **31st December, 2018** ಕ್ಕೆ ಅನುದಾನದ ಪಟ್ಟಿಯನ್ನು ನಿರೀಕ್ಷಿಸಬಹುದು.

ನಿಮ್ಮ ಯೋಜನೆಯು ಈ ಕೆಳಕಂಡ ವಿಷಯಗಳ ವಿವರಗಳನ್ನು ಒಳಗೊಂಡಿರಬೇಕು.

1. ಯೋಜನೆಯ ಉದ್ದೇಶಗಳು.
2. ಕಾರ್ಯ ಯೋಜನೆಗಳ ವಿವರ.
3. ಯೋಜನೆಯಿಂದ ಬರಬಹುದಾದ ಅಪೇಕ್ಷಿತ ಫಲಿತಾಂಶಗಳು.
4. ಖರ್ಚು- ವೆಚ್ಚಗಳ ವಿವರ.
5. ಆಯ್ಕೆಮಾಡಿಕೊಂಡ ಸರ್ಕಾರೀ ಶಾಲೆಯ ಸಂಪೂರ್ಣ ವಿವರ.
6. ಆಯ್ಕೆ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರ ಒಪ್ಪಿಗೆ ಪತ್ರ.

## ಬಜೆಟ್

- ರೂ. 2,00,000/- ವರೆಗೆ ಧನಸಹಾಯ ದೊರೆಯುತ್ತದೆ.
- ಪ್ರತಿ ಬಜೆಟ್ ಯೋಜನೆಗೆ ಸಂಬಂಧಿಸಿದ ನಿರ್ಧಿಷ್ಟ ಖರ್ಚು ವೆಚ್ಚಗಳ ವಿವರ ಹೊಂದಿರಬೇಕು.
- ಯೋಜನೆಗೆ ಸಂಬಂಧಿಸಿದ ವೈಯಕ್ತಿಕ ಗೌರವಧನ, ಪ್ರಯಾಣ ಹಾಗು ಚಟುವಟಿಕೆಗಳ ವಿವರ ಹೊಂದಿರಬೇಕು. ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಗತ್ಯವಿರುವ ನೂತನ ಉಪಕರಣಗಳನ್ನು ಮತ್ತು ವಸ್ತುಗಳನ್ನು ಕೊಳ್ಳಲು ಅವಕಾಶವಿರುವುದಿಲ್ಲ.
- ಸಾಂಸ್ಥಿಕ ಖರ್ಚು ವೆಚ್ಚಗಳು, ಕಟ್ಟಡದ ಖರ್ಚು ವೆಚ್ಚಗಳು ಮತ್ತು ಹೊಸ ಕಾಮಗಾರಿಗಳಿಗಾಗಿ ಅನುದಾನವಿರುವುದಿಲ್ಲ.
- ಲೆಕ್ಕ ಪರಿಶೀಲಕರಿಗಾಗಿ ನಿಗಧಿ ಪಡಿಸಿರುವ ರೂ. 3,000/- ನ್ನು ಯೋಜನೆಯ ಖರ್ಚು ವೆಚ್ಚಗಳಲ್ಲಿ ಸೂಚಿಸಿರಬೇಕು.

## ಅನುದಾನಕ್ಕೆ ಆಯ್ಕೆಯಾದ ಕಲಾವಿದರಿಂದ ನಿರೀಕ್ಷೆಗಳೇನೆಂದರೆ

- ಮುಂದಿನ ದಿನಗಳಲ್ಲಿ ಅನುಷ್ಠಾನಕ್ಕೆ ತರಬಹುದಾದ ಒಂದು ನೂತನ ಪಠ್ಯಕ್ರಮದ ಅಭಿವೃದ್ದಿಪಡಿಸುವಿಕೆ. ಅನುದಾನ ಸಂಭಂದಿತ ಚಟುವಟಿಕೆಗಳು, ಎದುರಾದ ಸಮಸ್ಯೆಗಳು ಮತ್ತು ಕಲಿಕೆಗಳ ದಾಖಲೆ.
- ಯೋಜನೆಯು ಸರಿಯಾದ ಕ್ರಮದಲ್ಲಿ ನಡೆಯುತ್ತಿರುವುದನ್ನು ತೋರಿಸಲು ಕಾಲಕಾಲಕ್ಕೆ ಸರಿಯಾದ ದಾಖಲೆಗಳ ಸಲ್ಲಿಕೆ.(ದಾಖಲೆಗಳು : ಛಾಯಾಚಿತ್ರ/ಆಡಿಯೋ/ವಿಡಿಯೋ/ ವರದಿಯ ರೂಪದಲ್ಲಿರಬೇಕು)
- ಯೋಚನಾ ಅವಧಿಯಲ್ಲಿ ಮಧ್ಯಂತರ ವರದಿ ಹಾಗು ಯೋಜನೆಯ ಕೊನೆಯಲ್ಲಿ ಸಮಗ್ರ ವರದಿ.

- ಯೋಜನಾ ಅವಧಿಯ ನಂತರ ಹಣಕಾಸಿನ ವರದಿಯ ಜೊತೆ ಯೋಜನೆಯ ಸಂಪೂರ್ಣ/ಸವಿಸ್ತಾರ ವರದಿ.

ನಿಮ್ಮ ಅನುಮಾನಗಳಿಗೆ /ಪ್ರಶ್ನೆಗಳಿಗೆ/ ಅಗತ್ಯ ಮಾಹಿತಿಗಾಗಿ ಈ ಮೇಲ್ ಐಡಿ krishna@indiaifa.org / radhika@indiaifa.orgಗೆ ಅಥವಾ ಪತ್ರ ಮುಖೇನ ಕೆಳಕಂಡ ವಿಳಾಸಕ್ಕೆ ಕಳುಹಿಸಿಕೊಡಲು ಕೋರಲಾಗಿದೆ

ಕೃಷ್ಣಮೂರ್ತಿ ಟಿ ಎನ್ / ರಾಧಿಕಾ ಭಾರದ್ವಾಜ್
ಕಾರ್ಯಕ್ರಮ ನಿರ್ವಹಣಾ ಅಧಿಕಾರಿಗಳು-ಕಲಾ ಶಿಕ್ಷಣ
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್
ಅಪೂರ್ವ ನೆಲಮಹಡಿ, ಸಂಖ್ಯೆ ೨೫೯, ೪ನೇ ಅಡ್ಡ ರಸ್ತೆ, ರಾಜಮಹಲ್ ವಿಲಾಸ್, ಎರಡನೇ ಹಂತ,
ಬೆಂಗಳೂರು -೫೬೦೦೯೪
ದೂರವಾಣಿ : 8762954080 / 7829327739

For more information on Kali-Kalisu follow this link:

http://www.indiaifa.org/programmes/arts-education.html